ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ : ಕಾಶಿಇ/ಶೈವಿ/218/ಸ್ಕೌಟ್ಸ್ ಅಂಡ್ ಗೈಡ್ಸ್/2020-21 (ಭಾಗ-2)

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಅರಮನೆ ರಸ್ತೆ, ಬೆಂಗಳೂರು-560001.
ದಿನಾಂಕ: 02.12.2023

**ಅಧಿಕೃತ ಜ್ಞಾಪನ**

ವಿಷಯ : ರಾಷ್ಟ್ರ ಮಟ್ಟದ ರೋವರ್ಸ್-ರೇಂಜರರ್ಸ್ ಕಾರ್ನಿವಲ್ ಸಂಘಟಿಸಿರುವ ಬಗ್ಗೆ.
ಉಲ್ಲೇಖ : ರಾಜ್ಯ ಕಾರ್ಯದರ್ಶಿಗಳು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ: ಎಸ್‌ಹೆಚ್‌ಕ್ಯೂ/Org 2 /N.L.R.R.C/35/2023-24 ದಿ: 09/11/2023.

***********

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ದಿನಾಂಕ: 21.12.2023 ರಿಂದ 25.12.2023 ರವರೆಗೆ ಜೈನ್ ಹೆರಿಟೇಜ್ ಶಾಲೆ, ಚನ್ನಮ್ಮನಗರ, ಡಬಲ್ ರೋಡ್, ಬೆಳಗಾವಿ ಜಿಲ್ಲೆ ಇಲ್ಲಿ ರಾಷ್ಟ್ರ ಮಟ್ಟದ ರೇಂಜರರ್ಸ್ ಮತ್ತು ರೋವರ್ಸ್‌ಗಳ ಕಾರ್ನಿವಲ್ ಶಿಬಿರವನ್ನು ಏರ್ಪಡಿಸಲಾಗಿದೆ. ಸದರಿ ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯಿರುವ ಕಾಲೇಜುಗಳು ಈ ಪತ್ರದೊಂದಿಗೆ ಅಡಕಿಸಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅವರ ಮಾಹಿತಿ ಪತ್ರದಂತೆ ಸದರಿಯವರನ್ನು ಸಂಪರ್ಕಿಸಿ ನೊಂದಾಯಿಸಿಕೊಂಡ ರೇಂಜರರ್ಸ್ ಮತ್ತು ರೋವರ್ಸ್‌ಗಳು ಹಾಗೂ ಲೀಡರ್ಸ್‌ಗಳು ಭಾಗವಹಿಸಲು ಅನುಮತಿ ನೀಡಲಾಗಿದೆ.

ಅಡಕ : ಉಲ್ಲೇಖಿತ ಪತ್ರ

Shobha 2/12/23
ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:
1. ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸದರಿ ತರಬೇತಿಯಲ್ಲಿ ಭಾಗವಹಿಸುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:
1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: [illegible], ಅಂತರ್ಜಾಲ: www.bsgkarnataka.org


ಸಂಖ್ಯೆ:ಎಸ್‌ಹೆಚ್‌ಕ್ಯೂ/Org.2/N.L.R.R.C/35/2023-24 - 1552 ದಿನಾಂಕ: 09.11.2023

ಮಾನ್ಯ ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:- ರಾಷ್ಟ್ರ ಮಟ್ಟದ ರೋವರ್ಸ್-ರೇಂಜರ್ಸ್ ಕಾರ್ನಿವಲ್ ಸಂಘಟಿಸಿರುವ ಬಗ್ಗೆ.
ಉಲ್ಲೇಖ:- ರಾಷ್ಟ್ರೀಯ ಸಂಸ್ಥೆಯ ಸುತ್ತೋಲೆ ಸಂಖ್ಯೆ.228/2023 ದಿನಾಂಕ: 8.11.2023.

* * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಷ್ಟ್ರ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ಜೈನ್ ಹೆರಿಟೇಜ್ ಶಾಲೆ ಮತ್ತು ಬೆಳಗಾವಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ದಿನಾಂಕ: 21 ರಿಂದ 25 ಡಿಸೆಂಬರ್ 2023ರ ವರೆಗೆ (5 ದಿನಗಳು) ಜೈನ್ ಹೆರಿಟೇಜ್ ಶಾಲೆ, ಚನ್ನಮ್ಮನಗರ, ಡಬ್ಬಲ್ ರೋಡ್, ಬೆಳಗಾವಿ ಜಿಲ್ಲೆ ಇಲ್ಲಿ ರಾಷ್ಟ್ರ ಮಟ್ಟದ ರೋವರ್ಸ್-ರೇಂಜರ್ಸ್ ಕಾರ್ನಿವಲ್ ಶಿಬಿರವನ್ನು ಆಯೋಜಿಸಲಾಗಿದೆ. ಸದರಿ ಶಿಬಿರದ ವಿವರಗಳು ಕೆಳಕಂಡಂತಿರುತ್ತದೆ.

| | |
|---|---|
| ಶಿಬಿರ | ರಾಷ್ಟ್ರ ಮಟ್ಟದ ರೋವರ್ಸ್-ರೇಂಜರ್ಸ್ ಕಾರ್ನಿವಲ್ |
| ಸ್ಥಳ | ಜೈನ್ ಹೆರಿಟೇಜ್ ಶಾಲೆ, ಚನ್ನಮ್ಮನಗರ, ಡಬ್ಬಲ್ ರೋಡ್, ಬೆಳಗಾವಿ ಜಿಲ್ಲೆ |
| ದಿನಾಂಕಗಳು | 21 ರಿಂದ 25 ಡಿಸೆಂಬರ್ 2023ರ ವರೆಗೆ (5 ದಿನಗಳು) |
| ರಾಷ್ಟ್ರ ಮಟ್ಟದ ಸ್ಕೌಟ್-ಗೈಡ್ ಕ್ಷೇಮ ನಿಧಿ ಶುಲ್ಕ | ತಲಾ ರೂ.250/-ಗಳು. ಈ ಶುಲ್ಕವನ್ನು ಆಯಾಯ ಕಾಲೇಜಿನ ರೋವರ್-ರೇಂಜರ್ ನಿಧಿಯಿಂದ ಭರಿಸುವುದು. |
| ಹಾಜರಾಗುವ ದಿನಾಂಕ & ಸಮಯ | 21.12.2023 ಬೆಳಗ್ಗೆ 9.00 ಗಂಟೆಯ ಒಳಗೆ |
| ಬಿಡುಗಡೆ ದಿನಾಂಕ ಮತ್ತು ಸಮಯ | 25.12.2023 ಮಧ್ಯಾಹ್ನದ ಊಟದ ನಂತರ |
| ಊಟ ವ್ಯವಸ್ಥೆ | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಿಂದ ನೀಡಲಾಗುವುದು |
| ವಸತಿ ವ್ಯವಸ್ಥೆ | ಜೈನ್ ಹೆರಿಟೇಜ್ ಶಾಲೆಯ ಆಡಳಿತ ಮಂಡಳಿಯಿಂದ ನೀಡಲಾಗುವುದು. |
| ಬಿ.ಎಸ್.ಜಿ. ಯು.ಐ.ಡಿ | ಭಾಗವಹಿಸುವ ಪ್ರತಿ ರೋವರ್-ರೇಂಜರ್ ಬಿ.ಎಸ್.ಜಿ. ಯುಐಡಿ ಸಂಖ್ಯೆ. ಕಡ್ಡಾಯ. ಅರ್ಜಿ ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. |
| ಪ್ರತಿ ಜಿಲ್ಲೆಯಿಂದ ಭಾಗವಹಿಸುವ ಕೋಟಾ | 6 ರೋವರ್ಸ್ + 6 ರೇಂಜರ್ಸ್ + 1 ದಳನಾಯಕರು |
| ಪ್ರಯಾಣ ಭತ್ಯೆ | ಆಯಾಯ ಕಾಲೇಜುಗಳ ರೋವರ್-ರೇಂಜರ್ ನಿಧಿಯಿಂದ ಭರಿಸುವುದು.<br>• ರಾಷ್ಟ್ರ ಸಂಸ್ಥೆಯವರು ತಮ್ಮಿಂದ ಮೂಲ ಟಿಕೇಟ್ ಪ್ರತಿಯನ್ನು ಪಡೆದು, ರಾಷ್ಟ್ರ ಸಂಸ್ಥೆಯವರಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಂದ ನಂತರ, ತಮ್ಮ ಬ್ಯಾಂಕ್ ಖಾತೆಗೆ ತಲಾ ಗರಿಷ್ಠ ರೂ.550/- ಮೊತ್ತವನ್ನು ಜಮೆ ಮಾಡುತ್ತಾರೆ. (ತಮ್ಮ ಬ್ಯಾಂಕ್ ಖಾತೆ ಸಂಖ್ಯೆಯನ್ನು ತರುವುದು) |

| | |
|---|---|
| ತರಬೇಕಾದ ವಸ್ತುಗಳು | ಸಮವಸ್ತ್ರ, ಬದಲಾಯಿಸುವ ಉಡುಪು, ಲಘು ಬೆಚ್ಚನೆಯ ಹಾಸಿಗೆ, ತಟ್ಟೆ, ಲೋಟ, ಪೆನ್ನು, ನೋಟ್ ಪುಸ್ತಕ, ಟಾರ್ಚ್, ಹಗ್ಗ, ಸ್ಟೇವ್ಸ್, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಅವಶ್ಯವಿರುವ ವಸ್ತುಗಳು, ಪ್ರಥಮ ಚಿಕಿತ್ಸೆ ಡಬ್ಬಿ ಮತ್ತು ಶಿಬಿರಕ್ಕೆ ಬೇಕಾದ ಸಾಮಗ್ರಿಗಳು ಇತ್ಯಾದಿ. |
| ಕಾರ್ಯಕ್ರಮ ಮತ್ತು ಚಟುವಟಿಕೆ ಹಾಗೂ ಸ್ಪರ್ಧೆಗಳು (ವೈಯುಕ್ತಿಕ/ ಗುಂಪು ಚಟುವಟಿಕೆಗಳು) | 1. ಕರ್ನಾಟಕ ರಾಜ್ಯ ಎಲ್ಲಾ ಕ್ಷೇತ್ರಗಳ ವೈಭವ ಪ್ರದರ್ಶನ<br>2. ಕರ್ನಾಟಕ ರಾಜ್ಯದ ವಸ್ತು ಪ್ರದರ್ಶನ<br>3. ಆಹಾರ ಮೇಳ<br>4. ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಗತ್ಯವಿರುವ ವೇಷಭೂಷಣ<br>5. ಜಾನಪದ ನೃತ್ಯ ಮತ್ತು ಹಾಡು<br>6. ಸಾಂಪ್ರದಾಯಿಕ ಉಡುಗೆಯೊಂದಿಗೆ ರ್‍ಯಾಂಪ್‌ವಾಕ್<br>7. ತಮ್ಮ ಜಿಲ್ಲೆಯ ವಿಶೇಷ ಹಬ್ಬದ ವೈಭವದ ಪ್ರದರ್ಶನ<br>9. ರಂಗೋಲಿ<br>10. ಪೈಯಿಂಟಿಂಗ್<br>11. ಮೆಹಂದಿ<br>12. ಕ್ಯಾಂಪ್ ಕ್ರಾಫ್ಟ್<br>13. ಯುವ ವೇದಿಕೆ<br>14. ಘೋಷಣೆಗಳನ್ನು ಬರೆಯುವ ಸ್ಪರ್ಧೆ<br>ಈ ಮೇಲೆ ತಿಳಿಸಿರುವ ಚಟುವಟಿಕೆ/ಕಾರ್ಯಕ್ರಮ/ಸ್ಪರ್ಧೆಗಳಿಗೆ ಅಗತ್ಯ ಪೂರ್ವ ಸಿದ್ಧತೆಗಳೊಂದಿಗೆ ಸಾಮಗ್ರಿಗಳನ್ನು ಕಡ್ಡಾಯವಾಗಿ ತರುವುದು. |
| ನೊಂದಾಯಿಸಲು ಕೊನೆಯ ದಿನಾಂಕ | ಜಿಲ್ಲೆಗಳಿಂದ ಭಾಗವಹಿಸಲು ಆಯ್ಕೆಯಾಗಿರುವ ರೋವರ್ಸ್-ರೇಂಜರ್ಸ್‌ಗಳ ಅರ್ಜಿಗಳನ್ನು ಮೇಲ್ ಪತ್ರದೊಂದಿಗೆ ದಿನಾಂಕ: 29.11.2023ರ ಒಳಗಾಗಿ ರಾಜ್ಯ ಕೇಂದ್ರ ಕಚೇರಿಗೆ ಕಳುಹಿಸುವುದು. ತಡವಾಗಿ ಬಂದ ಅರ್ಜಿಗಳನ್ನು ರಾಷ್ಟ್ರ ಸಂಸ್ಥೆಗೆ ಕಳುಹಿಸಲಾಗುವುದಿಲ್ಲ. ಈ ಕಾನಿರ್ವಲ್‌ಗೆ ತಮ್ಮ ಜಿಲ್ಲೆಯಿಂದ ಭಾಗವಹಿಸುವುದಿಲ್ಲವಾದಲ್ಲಿ, ಮೊದಲೇ ರಾಜ್ಯ ಸಂಸ್ಥೆಗೆ ತಿಳಿಸಿದ್ದಲ್ಲಿ, ಆ ಕೋಟಾವನ್ನು ಬೇರೆ ಜಿಲ್ಲೆಗೆ ನೀಡಲು ಅನುಕೂಲವಾಗುತ್ತದೆ. |

ತಮ್ಮ ವ್ಯಾಪ್ತಿಯ ಪದವಿ ಕಾಲೇಜುಗಳ ರೋವರ್ಸ್-ರೇಂಜರ್ಸ್‌ಗಳನ್ನು ಮೇಲ್ಕಂಡ ಶಿಬಿರಕ್ಕೆ ನಿಯೋಜಿಸುವಂತೆ ಮತ್ತು ಭಾಗವಹಿಸುವ ರೋವರ್ಸ್-ರೇಂಜರ್ಸ್‌ಗಳ "ರಾಷ್ಟ್ರ ಮಟ್ಟದ ಸ್ಕೌಟ್-ಗೈಡ್ ಕ್ಷೇಮ ನಿಧಿ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು" ಆಯಾಯ ಕಾಲೇಜು ರೋವರ್-ರೇಂಜರ್ ನಿಧಿಯಿಂದ ಭರಿಸಿಕೊಳ್ಳುವಂತೆ ಪ್ರಾಂಶುಪಾಲರಿಗೆ ಸೂಕ್ತ ಆದೇಶ ಮತ್ತು ಅನುಮತಿ ನೀಡಬೇಕಾಗಿ ನೀಡಿ, ಪ್ರೋತ್ಸಾಹಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ.

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಗೌರವದೊಂದಿಗೆ ಈ ಕೆಳಕಂಡವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಗಳಿಗಾಗಿ ಸಲ್ಲಿಸಿದೆ.

1. ಶ್ರೀ. ಶ್ರೀಕಾಂತ, ನೋಡಲ್ ಅಧಿಕಾರಿ, ಪದವಿ ಕಾಲೇಜು & ಎ.ಎಸ್.ಸಿ, ಬಿಎಸ್&ಜಿ, ಕರ್ನಾಟಕ